ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು,
ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ಆ /ಪಿಆರ್/1137/15-16 ದಿನಾಂಕ: 11-02-2016

ಮುಖ್ಯ ಅಭಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ, ಮಹದೇವಪುರ, ದಾಸರಹಳ್ಳಿ, ಯಲಹಂಕ, ರಮೂಸೌ, ಘ.ತ್ಯಾ.ನಿ, ಕೆರೆಗಳು, ಯೋಜನೆ-ಕೇಂದ್ರ ಮತ್ತು ಬೃ.ನೀ.ಗಾ)

'ಆದ್ಯತೆ ಮೇರೆಗೆ'

ಆಂತರಿಕ ಕಛೇರಿ ಜ್ಞಾಪನೆ

ವಿಷಯ: 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grant) ಹಂಚಿಕೆ ಮತ್ತು ಬಳಕೆ ಕುರಿತು ಮಾರ್ಗಸೂಚಿಗಳು- -ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ

ಉಲ್ಲೇಖ: 1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂ: ನಅಇ.245.ಎಸ್ಎಫ್ಸಿ.2015 ದಿನಾಂಕ: 17-07-2015

2) ಪೂಜ್ಯ ಮಹಾಪೌರರ ಜ್ಞಾಪನೆ ಸಂ: ಎಂಪಿಎಸ್/ಪಿಆರ್/ಜ್ಞ/235/15-16, ದಿನಾಂಕ: 05-11-2015

3) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂ: ನಅಇ.524.ಎಸ್ಎಫ್ಸಿ.2015, ಬೆಂಗಳೂರು ದಿನಾಂಕ: 05-01-2016

4) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂ: ನಅಇ.524.ಎಸ್ಎಫ್ಸಿ.2015, ಬೆಂಗಳೂರು ದಿನಾಂಕ: 08-01-2016

5) ಪೂಜ್ಯ ಮಹಾಪೌರರ ಜ್ಞಾಪನೆ ಸಂ: ಎಂಪಿಎಸ್/ಪಿಆರ್/ಜ್ಞ/608/15-16, ದಿನಾಂಕ: 05-11-2015

6) ಪೂಜ್ಯ ಮಹಾಪೌರರ ಜ್ಞಾಪನೆ ಸಂ: ಎಂಪಿಎಸ್/ಪಿಆರ್/ಜ್ಞ/608/15-16, ದಿನಾಂಕ: 03-02-2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ 09 ವಿವಿಧ ಉದ್ದೇಶಗಳಿಗೆ ಕ್ರಿಯಾ ಯೋಜನೆಗಳ ಕಾಮಗಾರಿಗಳ ವಿವರಗಳನ್ನು ಒಟ್ಟು ರೂ. 173.33 ಕೋಟಿಗಳಿಗೆ ಸಂಪೂರ್ಣ ವಿವರಗಳನ್ನು ನೀಡಲು ಸೂಚಿಸಿದ ಮೇರೆಗೆ ಪಾಲಿಕೆಯು 14ನೆ ಹಣಕಾಸು ಆಯೋಗದಲ್ಲಿ ಕೈಗೊಳ್ಳಬೇಕಾಗಿದ ಕ್ರಿಯಾ ಯೋಜನೆಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಉಲ್ಲೇಖ (3) ಮತ್ತು (4) ರ ಆದೇಶಗಳಲ್ಲಿ ವಿವಿಧ ಕ್ರಿಯಾ ಯೋಜನೆಗಳಿಗೆ ಒಟ್ಟು ಮೊತ್ತ ರೂ. 173.33 ಕೋಟಿಗಳಿಗೆ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ಉಲ್ಲೇಖ (2), (5) & (6) ರಲ್ಲಿ ಸರ್ಕಾರದಿಂದ ಅನುಮೋದನೆಯಾಗಿರುವ ಎಲ್ಲಾ ಕಾಮಗಾರಿಗಳಿಗೆ ಮೆ. ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ. ಉಲ್ಲೇಖ (1) ರಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿದ ನಂತರ ಕೆ.ಟಿ.ಪಿ.ಪಿ ಅಧಿನಿಯಮ 1999 (KTPP Act 1999) ಮತ್ತು ಕೆ.ಟಿ.ಪಿ.ಪಿ ನಿಯಮ 2000 (KTPP Act 2000) ದ ವ್ಯಾಪ್ತಿಯಲ್ಲಿ ಹಾಗೂ ಇ-ಪ್ರಕ್ಯೂರ್‌ಮೆಂಟ್ ಮುಖಾಂತರವೇ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು ಎಂದು ಆದೇಶ ನೀಡಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಮೊತ್ತವನ್ನು ಯಾವುದೇ ಕಾರಣಗಳಿಗೂ Lapse ಆಗದಂತೆ ಪಾಲಿಕೆಯು ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

2

ಈಗಾಗಲೇ ಉಲ್ಲೇಖ (3) ಮತ್ತು (4) ರಲ್ಲಿ 09 ವಿವಿಧ ಉದ್ದೇಶಗಳಿಗೆ ಕ್ರಿಯಾ ಯೋಜನೆಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈಗಾಗಲೇ ಉಲ್ಲೇಖ (3) ಮತ್ತು (4) ರ ಪ್ರತಿಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಗಳನ್ನು ನಿಯಮಾನುಸಾರವಾಗಿ ಕೈಗೊಳ್ಳಲು ಈಗಾಗಲೇ ಆದೇಶ ನೀಡಲಾಗಿರುತ್ತದೆ. ಆದರೆ, 14ನೇ ಹಣಕಾಸು ಆಯೋಗದಲ್ಲಿ ಮಂಜೂರಾಗಿರುವ ಎಲ್ಲಾ ಕ್ರಿಯಾ ಯೋಜನೆಗಳನ್ನು 2015-16ನೇ ಸಾಲಿನ ಈ ಆರ್ಥಿಕ ವರ್ಷದಲ್ಲಿಯೇ ಕೈಗೊಂಡು ಪೂರ್ಣಗೊಳಿಸಿ, ಅನುದಾನ ಉಪಯುಕ್ತತೆಯ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯವಾಗಿರುವುದರಿಂದ ಗುರುತಿಸಿರುವ 09 ಉದ್ದೇಶಗಳಿಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಕ್ರ. ಸಂ	ವಿವರ	ಮೊತ್ತ (ರೂ. ಲಕ್ಷಗಳಲ್ಲಿ)	ಅನುಮೋದನೆಯಾಗಿರುವ ಕಾಮಗಾರಿಗಳನ್ನು ಕೈಗೊಳ್ಳುವ ವಿಧಾನ
1	ಕುಡಿಯುವ ನೀರು ಕಾಮಗಾರಿಗಳು	2800.00	ಮೆ. ಕೆ.ಆರ್.ಐ.ಡಿ.ಎಲ್. ಬೆಂಗಳೂರು
2	ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ	1098.00	ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯುವುದು.
3	ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು	2600.00	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಿಳಿ, ಬೆಂಗಳೂರು ಸೇವಣಿ ಮಾಡುವುದು.
4	ಘನತ್ಯಾಜ್ಯ ವಸ್ತು ನಿರ್ವಹಣೆ	3234.95	ಮೆ. ಕೆ.ಆರ್.ಐ.ಡಿ.ಎಲ್. ಬೆಂಗಳೂರು
5	ಮಳೆ ನೀರು ಚರಂಡಿ ಕಾಮಗಾರಿಗಳು	2100.00	ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯುವುದು.
6	ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ)	600.00	ಮೆ. ಕೆ.ಆರ್.ಐ.ಡಿ.ಎಲ್. ಬೆಂಗಳೂರು
7	ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ	2500.00	ಮೆ. ಕೆ.ಆರ್.ಐ.ಡಿ.ಎಲ್. ಬೆಂಗಳೂರು
8	ವಿದ್ಯುತ್ ಚೀವಿ ದೀಪಗಳ ಅಳವಡಿಕೆ/ನಿರ್ವಹಣೆ / ವಿದ್ಯುತ್ ಉಳಿತಾಯದ ಕ್ರಮಗಳು	1700.00	ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯುವುದು.
9	ಸ್ಮಶಾನ/ಚಿತಗಾರ/ ಕಛೇರಿಗಳ ನಿರ್ವಹಣೆ	400.00	ಮೆ. ಕೆ.ಆರ್.ಐ.ಡಿ.ಎಲ್. ಬೆಂಗಳೂರು
	ಒಟ್ಟು	17033.00	

ಮೇಲೆ ಗುರುತಿಸಿರುವ 09 ಉದ್ದೇಶಗಳಿಗೆ ನೀಡಿರುವ ಆದೇಶದಂತೆ ಎಲ್ಲಾ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ತುರ್ತಾಗಿ ಅಗತ್ಯ ಕ್ರಮಗಳನ್ನು ಕೂಡಲೇ ಕೈಗೆತ್ತಿಕೊಳ್ಳಲು ಆದೇಶಿಸಿದೆ.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಘ.ತ್ಯಾ.ನಿ/ಕಲ್ಯಾಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಅಪರ/ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ, ಮಹದೇವಪುರ, ದಾಸರಹಳ್ಳಿ, ಯಲಹಂಕ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಮುಖ್ಯ ಲೆಕ್ಕಾಧಿಕಾರಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಆರ್ಥಿಕಾಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಉಪ ನಿರ್ದೇಶಕರು (ತೋಟಗಾರಿಕೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ), ದಾಸಪ್ಪ ಆಸ್ಪತ್ರೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಕಛೇರಿ ಪ್ರತಿ.